**ಆರ್ ಎ ನಂಃ 52/2020**
**ಆರ್ ಡಬ್ಲ್ಯೂ ಃ 2**

**ದಿಃ 27.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಅಪೀಲುದಾರರ** ಪರ ಶ್ರೀ ಎನ್ ಕೆ ವಕೀಲರಿಂದ :-

ಈ ಅಪೀಲನ್ನು ಯಾವ ವಿಚಾರಕ್ಕಾಗಿ ಸಲ್ಲಿಸಿದ್ದೀರಿ ಎಂಬ ವಿಚಾರ ತಮಗೆ ಗೊತ್ತಾ ಎಂದರೆ ಸಾಕ್ಷಿಯು ಹೌದು ಎಂದು ಸಾಕ್ಷಿ ನುಡಿಯುತ್ತಾರೆ. ಮಧ್ಯಂತರ ಅರ್ಜಿಗೆ ತಾವು ಸಲ್ಲಿಸಿರುವ ತಕರಾರಿನ ವಿಚಾರಗಳು ತಮಗೆ ಗೊತ್ತಾ ಎಂದರೆ ಸಾಕ್ಷಿಯು ಹೌದು ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ತಕರಾರಿಗೆ ನಾನು ಸಹಿಯನ್ನು ಹಾಕಿರುತ್ತೇನೆ. ಮಧ್ಯಂತರ ಅರ್ಜಿಗೆ ತಕರಾರನ್ನು ಸಲ್ಲಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಅರ್ಜಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿಗೆ ತಾವು ಸಲ್ಲಿಸಿರುವ ತಕರಾರಿಗೆ ತಮ್ಮ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ತಾವು ಮಧ್ಯಂತರ ಅರ್ಜಿಗೆ ಸಲ್ಲಿಸಿರುವ ತಕರಾರಿನಲ್ಲಿ ತಮ್ಮ ಸಹಿ ಇಲ್ಲ ಎಂದರೆ ಸರಿಯಲ್ಲ. ನಾನು ಪ್ರಮಾಣ ಪತ್ರವನ್ನು ನನ್ನ ತಂದೆ ಮತ್ತು ನನ್ನ ಪರವಾಗಿ ಸಲ್ಲಿಸಿರುತ್ತೇನೆ. ನಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರು ಮಾಡಲು ನಮ್ಮ ತಂದೆಯವರು ಮಾಹಿತಿಯನ್ನು ನೀಡಿರುತ್ತಾರೆ. ಸಾಕ್ಷಿಯು ಸ್ವತಃ ಮುಂದುವರಿದು ನಾನು ಮಾಹಿತಿಯನ್ನು ನೀಡಿರುವುದಿಲ್ಲ. ಓ ಎಸ್ 269/2007 ರ ದಾವೆಯಲ್ಲಿ ತಾವು ಪಕ್ಷಗಾರರಾಗಿದ್ದೀರಿ ಎಂದರೆ ಸರಿ. ಸದರಿ ದಾವೆಯು ವಜಾ ಆದ ನಂತರ ಪುನರ್ ಪರಿಶೀಲನೆ ಅರ್ಜಿಯನ್ನು ವಾದಿಗಳು ಸಲ್ಲಿಸಿರುತ್ತಾರೆ ಎಂದರೆ ಸರಿ. ದಿಃ 17.11.2020 ರಲ್ಲಿ ವಾದಿಗಳು ಸಲ್ಲಿಸಿರುವ ಪುನರ್ ಪರಿಶೀಲನೆ ಅರ್ಜಿ ವಜಾ ಆಗಿದೆ. ವಾದಿಗಳು ಸಲ್ಲಿಸಿರುವ ಪುನರ್ ಪರಿಶೀಲನೆ ಅರ್ಜಿ ರೂ. 2,000/- ಖರ್ಚು ಸಮೇತ ವಜಾ ಆಗಿದ್ದು ರೂ. 2,000/- ಹಣವನ್ನು ವಾದಿಗಳು ನ್ಯಾಯಾಲಯಕ್ಕೆ ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ನಮ್ಮ ವಕೀಲರ ಮುಖಾಂತರ ತಿಳಿದುಕೊಂಡಿರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಕನ್ನಡ ಭಾಷೆಯಲ್ಲಿ ಬರೆಸಿರುತ್ತೇನೆ. ನನ್ನ ಸಾಕ್ಷ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನನ್ನ ವಕೀಲರು ತಯಾರು ಮಾಡಿರುತ್ತಾರೆ. ನಾನುನನ್ನ ಸಾಕ್ಷ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಮ್ಮ ವಕೀಲರ ಮುಂದೆ ಪ್ರಾಮಾಣೀಕರಿಸಿರುತ್ತೇನೆ. ಪುನರ್ ಪರಿಶೀಲನೆ ಅರ್ಜಿಯ ದಂಡವನ್ನು ರೂ. 2,000/- ತಮ್ಮ ವಕೀಲರು ವಾದಿಗಳ ಕಡೆಯಿಂದ ಪಡೆದಿದ್ದಾರೆ ಎಂದರೆ ಸರಿಯಲ್ಲ. ಮೇಲ್ಮನವಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿಗಳು ಪುರಸ್ಕೃತವಾದರೆ ತಮಗೇನೂ ತೊಂದರೆ ಇಲ್ಲ ಎಂದರೆ ಸರಿಯಲ್ಲ. ಈ ಮೇಲ್ಮನವಿಯನ್ನು ಸಲ್ಲಿಸಲು ಯಾವುದೇ ಕಾಲ ವಿಳಂಬ ಆಗಿಲ್ಲ ಎಂದರೆ

**ಆರ್ ಎ ನಂಃ 52/2020**

**ಆರ್ ಡಬ್ಲ್ಯೂ ಃ 2**

ಸರಿಯಲ್ಲ. ಪುನರ್ ಪರಿಶೀಲನೆ ಅರ್ಜಿಯು ವಜಾ ಆದ ನಂತರ ಅಪೀಲುದಾರರು ಈ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ತಾವು 1 ನೇ ಅರ್ಜಿದಾರರ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**